ಶ್ರೀ ಜೆ. ಎಲ್. ಕಬಾಡಿ.—ಈಗಿರತಕ್ಕ ಸ್ಕೂಲ್‌ನಲ್ಲಿ, ಟ್ರೈನಿಂಗ್ ಹೊಂದಿರುವವರು ಎಲ್ಲ ಟ್ರೈನಿಂಗ್ ಕೂ ದಿದ್ದಾರೆ?

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ಸದ್ಯಕ್ಕೆ ಹಳೆಯ ಪುಯಾವ ರೀತಿ ಇದ್ದಪ್ಪೋ ಅದೇ ರೀತಿ ಮುಂದುವರಿಸುತ್ತಾ ಬಂದಿದ್ದೇವೆ. ಇನ್ಮುಮೇಲೆ ರಿ-ಆರ್ಗನೈಸ್ ಮಾಡಿ ಪ್ರತಿಯೊಂದನ್ನೂ ಯಾವ ರೀತಿ ಮಾಡಬೇಕೆಂದು ಪೂರ್ಣ ಪರಿಶೀಲನೆ ಮಾಡುವವರಾಗಿದ್ದೇವೆ.

ಶ್ರೀ ಮಂಜಪ್ಪ ಉಳ್ಳಾಳ್.—ಎನ್. ಇ. ಎಸ್. ಬ್ಲಾಕುಗಳಲ್ಲಿ ಲೆದರ್ ಇಂಡಸ್ಟ್ರಿಗಳನ್ನು ಏರ್ಪಡಿಸಬೇಕೆಂದು ಆಲೋಚನೆ ಮಾಡಿದ್ದೀರಾ?

ಶ್ರೀ ಬಿ. ಡಿ. ಜತ್ತಿ.—ಎನ್. ಇ. ಎಸ್. ನಲ್ಲಿ ಇದನ್ನು ಮಾಡುವುದಕ್ಕೆ ಅರಾಟ್‌ಮೆಂಟ್ ಮಾಡಿದ್ದಾರೆ.

Sri C. J. MUCKANNAPPA.—Supplementary to (*a*). How did you come to the conclusion that the need has not arisen? What are the reasons and under what circumstances Government has come to that conclusion?

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ವಿಶೇಷವಾಗಿ ಎಲ್ಲ ದೊಡ್ಡ ಕಂಪನಿಗಳಿವೆ, ಅಲ್ಲಿ ಇದನ್ನು ಮಾಡಿದ್ದಾರೆ. ಹಾಲಿ ಫ್ಲೆಕ್ಸ್ ಕಂಪೆನಿಯಲ್ಲಿ ಏರ್ಪಾಡು ಮಾಡಿದ್ದಾರೆ. ನಮ್ಮಲ್ಲಿ ಲೆದರ need arise ಆಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ನಮ್ಮಲ್ಲಿ Chrome Tanning ಕಂಪೆನಿ ತೆರೆದಿದ್ದೀರಿ. ಅದರಲ್ಲಿ ಒಬ್ಬರು Tanning Expert ಇದ್ದಾರೆಯೇ? ಅಲ್ಲಿ ಲೆದರ್‌ಕ್ಕೆ ಅವಶ್ಯಕತೆ ಇಲ್ಲವೆ?

ಶ್ರೀ ಮಾಲಿ ಮರಿಯಪ್ಪ.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಹಾಲಿ ಅದರಲ್ಲಿ ಸಾಕಷ್ಟು ಅನುಭವ ವಿರುವವರು ನಡೆಸುತ್ತಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಅದಕ್ಕೋಸ್ಕರವೇ ನಾನು ಪ್ರಶ್ನೆ ಹಾಕಿದ್ದು. ಇದರಲ್ಲಿ ಅನುಭವವಿರುವ ಜನರನ್ನು foreign countries ಗೆ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

Sri B. D. JATTI.—For small centres it is not necessary to send people to foreign countries and allow them to work in a village.

Audit of Accounts of Government Silk Filature, Kanakapura.

*Q.—193. Sri S. KARIAPPA (Virupakshipura).—

Will the Government be pleased to state:—

(*a*) whether the accounts of the Government Silk Filature, Kanakapura, have been audited during the years 1943, 1944, 1945, 1946, 1947, 1948 and 1949;

(*b*) if so, whether they will place the audit reports on the table of the House;

(*c*) whether any shortage or irregularity in the consumable article stores of the factory was noticed at any time during the above period;

(*d*) wheth r any detail audit has been conducted in view of the above irregularity?

A.-Sri B. D. JATTI (Chief Minister).—

(*a*) The Filatures were purchased by Government in the year 1945. The accounts of the Filatures were not audited during the years 1945, 1946, 1947, 1948 and 1949.

(*b*) Does not arise in view of reply to (*a*).

(*c*) During the years 1946-48 shortages of petrol of the value of Rs. 634-3-8 were noticed as a result of the Audit conducted by the staff of the Department of Sericulture.

(*d*) No.

ಶ್ರೀ ಎಸ್. ಕರಿಯಪ್ಪ.—ಕ್ರಮವಾದ ಆಡಳಿತ ನಡೆಯುವುದಕ್ಕೆ(ನಾದರೂ ವ್ಯವಸ್ಥೆ ಮಾಡಿದ್ದೀರಾ? ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಏಕೆ ಅವಶ್ಯಕತೆಯಿಲ್ಲವೆಂದು ಭಾವನೆ ಮಾಡಿದ್ದೀರಿ?

ಶ್ರೀ ಬಿ. ಡಿ. ಜತ್ತಿ.—ಆ ಕಾಲಕ್ಕೆ ಈ ರೀತಿಯ ಏರ್ಪಾಡು ಮಾಡುವುದು ಸಾಧ್ಯವಿರಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಈಗಲಾದರೂ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಈಗ ರಿ-ಆರ್ಗನೈಸ್ ಮಾಡುವುದು ಆಲೋಚನೆಯಲ್ಲಿದೆ.

Appointment of District Judges.

*Q.—263. Sri V. P. DEENADAYALU NAIDU (Cubbonpet).—

Will the Government be pleased to state:—

(*a*) the number of posts of District Judges which fell vacant and the number of posts created during the last three years;

(*b*) how the above vacancies were filled up;

(*c*) whether they have fixed any proportion or ratio from the bar and otherwise and whether such a policy was followed hitherto?